ಶ್ರೀ ವೇದಾಂತ ಹೆಬ್ಬಾಗಿ.— ಈ ಒಂದು ಕಾರ್ಯಕ್ಕೆ ಸಾಕಷ್ಟು ಹಣ ಬೇಕಾಗಿರುವುದರಿಂದ ಪರಿಶೀಲಿಸಲಾಗುವುದು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದು ಏನಾಗಿದೆ ಎಂದರೆ ಹುಚ್ಚು ಬಿಡದ ಹೊರತು ಮದುವೆಯಾಗುವಂತಿಲ್ಲ, ಮದುವೆಯಾಗದ ಹೊರತು ಹುಚ್ಚು ಬಿಡುವಂತಿಲ್ಲ ಎಂದಂತಾಗಿದೆ. ಮೈಸೂರಿನಲ್ಲಿ ಕೈಗಾರಿಕೆಗಳು ವಿಪರೀತವಾಗಿ ಬೆಳೆಯುತ್ತಿದೆ. ಆದ್ದರಿಂದ ಹಂತಹಂತವಾಗಿ ಈ ರಸ್ತೆಯ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳುತ್ತೀರಾ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ — ನಮಗೆ ಹುಚ್ಚು ಬರುವ ಹಂತಕ್ಕೆ ತಲುಪಿಲ್ಲ. ಮಾನ್ಯ ಸದಸ್ಯರಿಗೆ ಇಷ್ಟುಮಾತ್ರ ಹೇಳಬಲ್ಲೆ, ಹಂತಹಂತವಾಗಿ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡೋಣ.

ಹರಿಹರ ತಾಲ್ಲೂಕು ನಂದಿಗುಡಿ ಹತ್ತಿರ ಕಟ್ಟಬೇಕೆಂದಿರುವ ಸೇತುವೆಯನ್ನು 1986–87ನೇ ಸಾಲಿನ ಬಜೆಟ್‌ನಲ್ಲಿ ಸೇರಿಸಲಾಗುವುದೇ.

೯೯೦. ಶ್ರೀ ಬಿ. ಜಿ. ಕೊಟ್ರಪ್ಪ.— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಿಹರ ತಾಲ್ಲೂಕು ನಂದಿಗುಡಿ ಗ್ರಾಮದ ಹತ್ತಿರಕ್ಕೆ ಸೇತುವೆಯನ್ನು ಕಟ್ಟುವ ಯೋಜನೆಯು ಈ ಸಾಲಿನ ಆಯವ್ಯಯದಲ್ಲಿ ಸೇರಿಸುವ ಉದ್ದೇಶವಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈ ಕೆಲಸವು ೧೯೮೬–೮೭ನೇ ಆಯವ್ಯಯ ಪಟ್ಟಿಯಲ್ಲಿ ಸೇರಿದೆ.

ಶ್ರೀ ಹೆಚ್. ಡಿ. ದೇವೇಗೌಡ.— ಹರಿಹರ ತಾಲ್ಲೂಕು ನಂದಿಗುಡಿ ಗ್ರಾಮದ ಹತ್ತಿರಕ್ಕೆ ಸೇತುವೆಯನ್ನು ಕಟ್ಟುವ ಬಗ್ಗೆ ಮಾನ್ಯ ಕೊಟ್ರಪ್ಪ ಮತ್ತು ಕೆ. ಬಿ, ಮಲ್ಲಪ್ಪನವರು ಬಹಳ ಕಾಳಜಿಯಿಂದ ಇಬ್ಬರೂ ಸೇರಿಕೊಂಡಿದ್ದಾರೆಂದು ಕಾಣುತ್ತದೆ. ಇದಕ್ಕೆ ೭೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕು ಎನ್ನುವ ಅಭಿಪ್ರಾಯವಿದೆ. ಇದಕ್ಕಾಗಿ ಸ್ವಲ್ಪ ಹಣವನ್ನು ಸಹ ಇಟ್ಟಿದ್ದೇವೆ. ಇನ್ನೂ ಏನಾದರೂ ಪಂಚೂರಾತಿಯನ್ನು ಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನೂ ಸಹ ತೀವ್ರವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಬಜೆಟ್‌ನಲ್ಲಿ ರಾಣಿಬೆನ್ನೂರು, ಹಿರೆಕೆರೂರು ಇದೆಲ್ಲ ಸೇರಿಸಿರುತ್ತೀರಿ...

ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ಕೊಟ್ರಪ್ಪನವರ ಮನಸ್ಸಿನ ಇಚ್ಛೆಯನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಬಹಳ ತೀವ್ರವಾಗಿ ಆಲೋಚನೆ ಮಾಡುತ್ತದೆಂದು ಹೇಳುತ್ತೇನೆ.

ಅರಣ್ಯ ಭೂಮಿಯನ್ನು ಖಾಯಂ ಮಾಡುವ ಬಗ್ಗೆ.

೧೬೬. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).— ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಒತ್ತುವರಿಯಾದ ಅರಣ್ಯ ಭೂಮಿಯನ್ನು ಖಾಯಂ ಮಾಡಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಆ) ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನು ಒಳಪಡುತ್ತದೆ. ಅದರಿಂದ ಶೇಕಡಾವಾರು ಹರಿಜನ ಗಿರಿಜನರಿಗೆ ಎಷ್ಟು ಜಮೀನು ದೊರಕಲಿದೆ ? ಹಾಗೂ ಈ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅರಣ್ಯ ಸಂರಕ್ಷಣಾ ಕಾಯ್ದೆ ೧೯೮೦ರ ಪ್ರಕಾರ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗಾಗಿ ಬಿಟ್ಟುಕೊಡುವ ವಿಷಯದಲ್ಲಿ ಭಾರತ ಸರ್ಕಾರದ ಪೂರ್ವಾನುಮತಿ ಅಗತ್ಯವಿರುತ್ತದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರವು ಭಾರತ ಸರ್ಕಾರದೊಡನೆ ವ್ಯವಹರಿಸುತ್ತಿದ್ದು ಅವರಿಂದ ಅನುಮತಿ ಬಂದನಂತರ ಈ ವಿಷಯದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು.

ಆ) ಒಟ್ಟು ಳಿ.ಗಿ೦೬.೬೫ ಹೆಕ್ಟೇರ್ ಜಮೀನು ಒಳಪಡುತ್ತದೆ ಮತ್ತು ಆ ಪೈಕಿ ಅಂದಾಜು ಶೇಕಡಾ ಳಿ೭.೫ರಲ್ಲಿ ಜಮೀನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಒತ್ತುವರಿ ಮಾಡಿದವುಗಳಾಗಿರುತ್ತದೆ. ಮೇಲೆ ಹೇಳಿದಂತೆ ಒತ್ತುವರಿಯಾದ ಅರಣ್ಯ ಭೂಮಿಯ ವಿಷಯದಲ್ಲಿ ಭಾರತ ಸರ್ಕಾರದಿಂದ ಅನುಮತಿ ಬಂದನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. (ಈ ಪೈಕಿ ೯೫೬.೩೧ ಹೆಕ್ಟೇರ್ ಸಿ ಮತ್ತು ಡಿ ವರ್ಗದ ಬೀದರ್ ಜಿಲ್ಲೆಯ ಜಾಗಗಳು ಸೇರಿದೆ).

ಶ್ರೀ ಪಿ.ಸಿ, ಮುನಿಸ್ವಾಮಯ್ಯ —ಮಾನ್ಯ ಅಧ್ಯಕ್ಷರೇ, ಭಾರತ ಸರ್ಕಾರದಿಂದ ಅನುಮತಿ ಬಂದ ನಂತರ ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಸಂಬಂಧವಾಗಿ ಭಾರತ ಸರ್ಕಾರದೊಡನೆ ಪತ್ರವ್ಯವಹಾರ ಮಾಡಿದ್ದಾರೆಯೇ ಎಂದು ಮಾನ್ಯ ಮಂತ್ರಿಗಳಿಂದ ಉತ್ತರ ನಿರೀಕ್ಷಿಸುತ್ತೇನೆ.

ಶ್ರೀ ಬಿ.ಎ ಜೀವಿಜಯ.—ಹೌದು ಪತ್ರವ್ಯವಹಾರ ಮಾಡಿದ್ದೇವೆ.

ಪ್ರಶ್ನೆ ಸಂಖ್ಯೆ 1685
ಪ್ರಶ್ನೋತ್ತರವನ್ನು ಲಗತ್ತಿಸಿಲ್ಲ

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಈ ಬಂದು ಹೇಳಿಕೆ ಜವಾಬ್ದಾರಿಯುತವಾಗಿಲ್ಲವೆಂದು ಹೇಳಬೇಕಾಗುತ್ತದೆ. ಮೂರು ತಿಂಗಳಲ್ಲಿ ವರದಿಯನ್ನು ಸಲ್ಲಿಸಬೇಕೆಂದು ಸಮಿತಿಯನ್ನು ರಚಿಸುವಾಗ ಟರ್ಮ್ಸ್ ಆಫ್ ರೆಫರೆನ್ಸ್ ಹಾಕಿರಲಿಲ್ಲವೇ ಎಂದು ನಾನು ಕೇಳುತ್ತಿದ್ದೇನೆ. ಕರಡು ವರದಿ ಮೂರು ತಿಂಗಳ ಹಿಂದೆ ತಯಾರಾಗಿದೆ ಎಂದು ಸಮಿತಿಯ ಸದಸ್ಯರೊಬ್ಬರು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಇದು ದಿನಾಂಕ ೧೪—೧—೧೯೮೬ರ ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಸಮಿತಿಯು ಈಗಾಗಲೇ ಸಲ್ಲಿಸಿರುವ ತಾತ್ಕಾಲಿಕ ವರದಿಯನ್ನು ಸರ್ಕಾರ ಒಪ್ಪಿಕೊಂಡಿದೆ ಎಂದು ಅವರು ಹೇಳಿದ್ದಾರೆ ಈ ಸಮಿತಿಯು ಅಂತಿಮ ವರದಿ ಸಲ್ಲಿಸಲು ವಿಳಂಬವಾಗಿರುವುದರ ಬಗ್ಗೆ ಕೇಳಿದ್ದೇನೆ. ಸಮಿತಿಯ ಕಾಲಾವಧಿಯನ್ನು ಇನ್ನೆಷ್ಟು ಸಮಯ ಅಂತ ವಿಸ್ತರಣೆ ಮಾಡಲಾಗಿದೆ? ಸಮಿತಿಯಂ ಕೊನೆಯ ಸಿಟ್ಟಿಂಗ್ ಯಾವಾಗ ಆಯಿತು ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮೂಲತಃ ಯಾವ ಟರ್ಮ್ಸ್ ಆಫ್ ರೆಫೆರೆನ್ಸ್ ಅನ್ನು ಈ ಕಮಿಟಿಗೆ ಕೊಟ್ಟಿದೇವೋ ಆದರಲ್ಲಿ ಸ್ವಲ್ಪ ಬದಲಾವಣೆಯನ್ನು ಆಮೇಲೆ ಮಾಡಲಾಯಿತು. ಮೊದಲು ಸೇರಿಸಿದ್ದು, ಕೇಂದ್ರ ಸರ್ಕಾರದ ಅಂಡರ್‌ಟೇಕಿಂಗ್ಸ್ ಬೆಂಗಳೂರು ನಗರದಲ್ಲಿ ಮುಖ್ಯವಾಗಿ ರತಕ್ಕಂಥಾದ್ದು. ಮೊದಲು ಕಮಿಟಿಗೆ ಶ್ರೀಮತಿ ಮಾರ್ಗರೇಟ್ ಆಳ್ವ ಅವರು ಅಧ್ಯಕ್ಷರಾಗಬೇಕೆಂದು ಆಜ್ಞೆಯನ್ನು ಹೊರಡಿಸಲಾಗಿತ್ತು. ಆದರೆ ಅವರು ಆಮೇಲೆ ಯಾವುದೋ ಕಾರಣಕ್ಕೆ ಸಾಧ್ಯವಿಲ್ಲವೆಂದು ಬರೆದಿದ್ದರಿಂದ ಶ್ರೀಮತಿ ಡಾ: ಸರೋಜಿನಿ ಮಹಿಷಿ ಅವರನ್ನು ಆ ಜಾಗಕ್ಕೆ ಚೇರ್ಮನ್‌ರಾಗಿ ನೇಮಕ ಮಾಡಿದೆವು ಈಗ ಕಮಿಟಿಯ ವ್ಯಾಪ್ತಿ ಇಡೀ ರಾಜ್ಯಕ್ಕೇ ಆನ್ವಯಿಸುತ್ತದೆ. ನಾನು ಒಂದು ವರ್ಷ ಹತ್ತು ತಿಂಗಳು ಹಿಂದೆ ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವುದೋ ಒಂದು ಹೊಸ ಸಿಮೆಂಟು ಕಾರ್ಖಾನೆಯ ಆಡಿಗಲ್ಲು ಸಮಾರಂಭಕ್ಕೋ ಅಥವಾ ಇನ್ಯಾವುದೋ ಸಮಾರಂಭಕ್ಕೆ ಹೋಗಿದ್ದೆ. ಅಲ್ಲಿ ಸ್ಥಾನಿಕ ಜನರು ಏನು ಹೇಳಿದರು ಎಂದರೆ ಮತ್ತೊಂದು ಸಿಮೆಂಟು ಕಾರ್ಖಾನೆ ಅಲ್ಲಿ ಇದೆ, ಅಲ್ಲಿ ಸ್ಥಾನಿಕ ಜನರಿಗೆ ಮತ್ತು ಕನ್ನಡಿಗರಿಗೆ ನೌಕರಿಯಲ್ಲಿ ಪ್ರಾಶಸ್ತ್ಯ ಸಿಕ್ಕುತ್ತಿಲ್ಲ ಎಂದು ಅವರು ಹೇಳಿದರು. ಅಲ್ಲಿಂದ ಬಂದ ಮೇಲೆ ನಾನು ಈ ಕಮಿಟಿಯ ವ್ಯಾಪ್ತಿಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸಬೇಕೆಂಬ ನಿರ್ಣಯ ಮಾಡಿದೆ. ಶ್ರೀಮಾನ್ ಸತ್ಯರವರು ಒಂದು ಹೇಳಿಕೆಯನ್ನು ಕೊಟ್ಟಿದ್ದು ನಿಜ, ಈಗಾಗಲೇ ಕರಡು ವರದಿಯನ್ನು ಸಿದ್ಧಪಡಿಸಿದ್ದು ಅದನ್ನು ಸಮಿತಿ ಅಂಗೀಕರಿಸುವುದು ಮಾತ್ರ ಉಳಿದಿದೆ ೨೬—೧೧—೮೫ರಂದು ಕನ್ನಡಪ್ರಭ ಪತ್ರಿಕೆಯಲ್ಲಿ ಇದು ಬಂದಿದೆ. ಇದಾದಮೇಲೆ ಒಂದೆರಡು ಮೀಟಿಂಗ್‌ಗಳನ್ನು ಕರೆದಿರಬೇಕು. ಈಗ ಸಧ್ಯದಲ್ಲಿ ಮತ್ತೊಂದು ಪತ್ರವನ್ನು ಸಮಿತಿಯ ಅಧ್ಯಕ್ಷರು ಬರೆದಿದ್ದು ಸ್ವಲ್ಪ ಸಮಯ ಬೇಕು ಎಂದು ಕೇಳಿದ್ದಾರೆ. ಜವಾಬ್ದಾರಿಯನ್ನು ಅವರ ಮೇಲೆ ಹಾಕಿದಮೇಲೆ ಒತ್ತಾಸೆ ತರತಕ್ಕದ್ದು ಸರಿಯಲ್ಲ. ಮತ್ತು ಒಂದು ದೃಷ್ಟಿಯಲ್ಲಿ ಈ ಸಮಿತಿಯನ್ನು ಮುಂದುವರೆಸಿಕೊಂಡು ಹೋದರೆ ಕೆಟ್ಟದ್ದೇನೂ ಆಗುವುದಿಲ್ಲವೆಂದು ನನಗನ್ನಿಸುತ್ತದೆ. ಇದರ ಬಗ್ಗೆ ಇನ್ನೂ ತೀರ್ಮಾನ ಮಾಡಿಲ್ಲ. ಆಗತ್ಯಬಿದ್ದರೆ ಈ ಸಮಿತಿಯನ್ನು ಒಂದು ಸ್ಟ್ಯಾಂಡಿಂಗ್ ಕಮಿಟಿ ಎಂದು ಬೇಕಾದರೆ ಮಾಡಬಹುದು.